ಅಧ್ಯಕ್ಷರು : ತಮ್ಮಲ್ಲಿರತಕ್ಕ ಎಲ್ಲಾ ವಿವರಗಳನ್ನು ಅವರಿಗೆ ಕೊಡಿ. ಎಲ್ಲವನ್ನೂ ಇಲ್ಲೇ ಪ್ರಸ್ತಾಪ ಮಾಡುವುದಾದರೆ ಆಪಾದಿತರು ಹುಷಾರಾಗುತ್ತಾರೆ. ವಿಚಾರಣೆ ಮಾಡುವ ಅಧಿಕಾರಿಗಳ ಮುಂದೆ ಆ ಎಲ್ಲ ವಿವರಗಳನ್ನು ಕೊಡಿ.

ಶ್ರೀ ಟಿ.ಬಿ. ಜಯಚಂದ್ರ : ಏನು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ, ತಕ್ಷಣ ಸಂಬಂಧಪಟ್ಟ ಎಲ್ಲ ರೆಕಾರ್ಡುಗಳನ್ನು ಮೊದಲು ತರಿಸಬೇಕು. ಇಲ್ಲದಿದ್ದರೆ ನಾನು ಈ ಮೊದಲೇ ಹೇಳಿದ ಹಾಗೆ ಎಲ್ಲವನ್ನು ತಿದ್ದತಕ್ಕ ಕೆಲಸ ಆಗಿ ಹೋಗುತ್ತದೆ.

ಅಧ್ಯಕ್ಷರು : ಮಾಡುತ್ತಾರೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, 1993ರ ಕರ್ನಾಟಕ ಪಂಚಾಯಿತಿ ರಾಜ್ ಅಧಿನಿಯಮದ 262(3)ನೇ ಕಲಮಿನ ಮೇರೆಗೆ ;

1992-93ನೇ ಸಾಲಿನ ಬಿಜಾಪುರ ಜಿಲ್ಲಾ ಪರಿಷತ್ತಿನ ವಾರ್ಷಿಕ ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

ಅಧ್ಯಕ್ಷರು : "1995ನೇ ಮಾರ್ಚ್ 20ರಂದು ವಿಧಾನ ಮಂಡಲದ ಸದಸ್ಯರನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ" ಎಂದು ಶ್ರೀ ಕೆ.ಎನ್.ನಾಗೇಗೌಡರು ಅವರು ದಿನಾಂಕ 22-3-95ರಂದು ಸೂಚಿಸಿದ ಪ್ರಸ್ತಾವದ ಮೇಲಿನ ಚರ್ಚೆಗೆ ಮುಖ್ಯಮಂತ್ರಿಯವರಿಂದ ಉತ್ತರ ಈಗ ಸಭಾ ನಾಯಕರು ಉತ್ತರ ನೀಡಬೇಕು.

* ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ ಈ ಸದನದಲ್ಲಿ ಸರ್ಕಾರದ ಪರವಾಗಿ ಉತ್ತರವನ್ನು ಹೇಳತಕ್ಕ ಸಂದರ್ಭದಲ್ಲಿ ಗೌರವಾನ್ವಿತ ವಿರೋಧಿ ಪಕ್ಷದ ಮುಖಂಡರುಗಳು ಸರ್ಕಾರ ರಾಜ್ಯಪಾಲರ ಭಾಷಣದ ಮೇಲೆ ಉತ್ತರ ಕೊಡುವುದಕ್ಕೆ ಮುಂಚೆ ಅವರಿಗೆ ಯಾವ ಜವಾಬ್ದಾರಿಯನ್ನು ನೀವು ನಿರ್ವಹಣೆ ಮಾಡಲಿಕ್ಕೆ ಅವಕಾಶ ಕೊಡುತ್ತೀರಿ ಅದನ್ನು ಮೊದಲು ತಿಳಿಸಿ, ಆಮೇಲೆ ಉತ್ತರ ಹೇಳಬೇಕೆಂದು ಹೇಳಿ ಒಂದು ರೀತಿ ದಿಗ್ಬಂಧನ ಹಾಕಿದ್ದರಿಂದ ಸ್ವಲ್ಪಮಟ್ಟಿಗೆ ಕಸಿವಿಸಿಯಾಯಿತು. ಇವತ್ತು ತಮ್ಮ ಮಧ್ಯಪ್ರವೇಶದಿಂದ ಸರ್ಕಾರದ ಪರವಾಗಿ ಉತ್ತರ ಕೊಡುವುದಕ್ಕೆ ಸನ್ಮಾನ್ಯ ವಿರೋಧಿಪಕ್ಷಗಳ ಎಲ್ಲಾ ಮುಖಂಡರು ಸುಗಮವಾದ ಒಂದು ವರದಿಯನ್ನು ತಾವು ಕೊಟ್ಟಂತಪ ಒಂದು ಸೂಚನೆಯ ಮೇಲೆ ಆ ಹಾದಿಯನ್ನು ಹಿಡಿದು ಕೇವಲ ಕೆಲವು ನಿಮಿಷಗಳು ಸಭಾತ್ಯಾಗ ಮಾಡಿ ಪುನಃ ನಾವು ಸದನಕ್ಕೆ ಬಂದು ಕಾರ್ಯಕಲಾಪದಲ್ಲಿ